# ಭೂಮಿಯೊಂದಿಗಿನ ನಮ್ಮ ಚಲನೆಯ ವೇಗವೆಷ್ಟು?

**ಆತನು ಶೂನ್ಯದ ಮೇಲೆ (ಆಕಾಶದ) ಉತ್ತರದಿಕ್ಕನ್ನು ವಿಸ್ತರಿಸಿ ಭೂಲೋಕವನ್ನು ಯಾವ ಆಧಾರವೂ ಇಲ್ಲದೆ ತೂಗಹಾಕಿದ್ದಾನೆ** (ಯೋಬನು 26:7).

ದಂತ ಕಥೆಗಳ ಪ್ರಕಾರ, ಎಟ್ಲಾಸ್ ಎಂಬ ದೇವತೆಯೊಬ್ಬನು ತನ್ನ ಬಲಿಷ್ಠ ಬಾಹುಗಳ ಮೇಲೆ ಇಡೀ ಭೂಮಂಡಲವನ್ನು ಹೊತ್ತು ನಿಂತಿದ್ದಾನೆ ಎಂಬ ನಂಬಿಕೆಯ ಕಾಲವಿತ್ತು. ನಮ್ಮ ಭೂಮಿಯು ಬಲುದೊಡ್ಡ ಆಮೆಯೊಂದರ ಬೆನ್ನ ಮೇಲೆ ನಿಂತಿದೆ ಅಥವಾ ದೊಡ್ಡ ಆನೆಯು ಭೂಮಿಯನ್ನು ಆಧರಿಸಿ ಹಿಡಿದು ನಿಂತಿದೆ ಎಂಬ ಈ ನಂಬಿಕೆಗಳೆಲ್ಲಾ ನಾಶವಾಗಿರುವ ಪ್ರಸಕ್ತ ವೈಜ್ಞಾನಿಕ ಯುಗದಲ್ಲಿ ಈ 6000 ಮಿಲಿಯ, ಮಿಲಿಯ, ಮಿಲಿಯ ಟನ್ ತೂಕದ ಭೂಮಿಯು ಯಾವ ಆಧಾರವೂ ಇಲ್ಲದೆ ಹೇಗೆ ತೇಲುತ್ತಿದೆ ಎಂಬ ಕುರಿತು ವಿವರಣೆಗಳು ಇದ್ದರೂ ಕರಾರುವಾಕ್ಕಾದ ಅದರ ಸುತ್ತುವಿಕೆಯ ಹಿಂದಿನ ಶಕ್ತಿ ಏನು ಎಂಬ ವೈಜ್ಞಾನಿಕ ವಿವರಣೆ ಇಲ್ಲ. ಆದರೆ ಭೂಲೋಕ ಮತ್ತು ಆಕಾಶಮಂಡಲಗಳನ್ನು ದೇವರು ಸೃಷ್ಟಿಮಾಡಿದ್ದೆಂದು ಸೊಲೊಮೋನನಿಗೆ ತಿಳಿದಿತ್ತು.

**"ಯೆಹೋವನು ಜ್ಞಾನದ ಮೂಲಕ ಭೂಮಿಯನ್ನು ಸ್ಥಾಪಿಸಿ ವಿವೇಕದ ಮುಖಾಂತರ ಆಕಾಶ ಮಂಡಲವನ್ನು ಸ್ಥಿರಪಡಿಸಿದನು"** (ಜ್ಞಾನೋಕ್ತಿ 3:19).

ಯೋಬನು ಸಾವಿರಾರು ವರುಷಗಳ ಹಿಂದೆಯೇ **"ಭೂಲೋಕವನ್ನು ಯಾವ ಆಧಾರವೂ ಇಲ್ಲದೆ ತೂಗುಹಾಕಿದ"** ಸೃಷ್ಟಿ ಕರ್ತನ ಕುರಿತು ಹೇಳಿದ್ದಾನೆ.

ಮಾನವನು ಗಂಟೆಗೆ 1000 ಮೈಲುಗಳಿಗೂ ಮಿಕ್ಕಿ ಚಲಿಸುವ ವಿಮಾನಗಳನ್ನು ಕಂಡುಹಿಡಿದಿದ್ದಾನೆ. ಆದರೆ ನಾವು ಭೂಮಿಯೊಂದಿಗೆ ದಿನರಾತ್ರಿ ಚಲಿಸುವ ವೇಗದ ಲೆಕ್ಕ ಹಾಕೋಣ.



✍ ಸುನಯನ ವಾಲ್ಟರ್ಸ್

ಪ್ರತಿ 24 ತಾಸುಗಳಿಗೆ ಭೂಮಿಯು ತನ್ನ ಅಕ್ಷರೇಖೆಯಲ್ಲಿ ಒಂದು ಸಂಪೂರ್ಣ ಸುತ್ತು ತಿರುಗುತ್ತದೆ. ಇದು ಸುಮಾರು 25000 ಮೈಲಿನ ಪಯಣ. ಇದರೊಂದಿಗೆ ಸೂರ್ಯನ ಸುತ್ತ ತನ್ನ ಕಕ್ಷೆಯಲ್ಲಿ ಗಂಟೆಗೆ 66000 ಮೈಲಿನ ವೇಗದಲ್ಲಿ ಸುತ್ತುತ್ತದೆ. ಇದಿಷ್ಟೇ ಅಲ್ಲದೆ ಇಡೀ ನಕ್ಷತ್ರ ಮಂಡಲವೇ ತಾಸಿಗೆ 43000 ಮೈಲು ವೇಗದಲ್ಲಿ ಚಲನೆಯಲ್ಲಿ ಇರುತ್ತದೆ. ಎಲ್ಲವನ್ನೂ ಲೆಕ್ಕಹಾಕಿದರೆ ಭೂಮಿಯ ಮೇಲಿನ ನಮ್ಮ ಸುತ್ತುವಿಕೆಯ ವೇಗವು ಗಂಟೆಗೆ 1,00,000 ಮೈಲಿಗಿಂತಲೂ ಹೆಚ್ಚು? ಆದರೆ ಇದರ ಕಿಂಚಿತ್ತೂ ಅನುಭವವು ನಮಗೆ ಆಗುವುದಿಲ್ಲ. ಈ ಎಲ್ಲಾ ಪಯಣವನ್ನು ಆರಂಭಿಸಿದಾತನು ಯಾರು? ಮತ್ತು ಈ ನಿಯಮವನ್ನು ಎಂದೂ ತಪ್ಪದಂತೆ ನಿಯಮಿಸಿದಾತನು ಯಾರು? **"ತನ್ನ ಶಕ್ತಿಯು ವಾಕ್ಯದಿಂದ ಸಮಸ್ತಕ್ಕೆ ಆಧಾರವೂ"** (ಇಬ್ರಿಯ 1:3).

**ಆದಾತನಾದ ದೇವರಲ್ಲದೆ ಇನ್ನಾರು?**

ಆದರೆ ಇದಕ್ಕೆ ಅಂತ್ಯವಿದೆ. ಭೂಮಿಗೆ ಪಾಪವು ಬಂದುದರಿಂದ, ನ್ಯಾಯತೀರ್ಪಿನ ಸಮಯದಲ್ಲಿ – **"ಆಕಾಶಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವುದು. ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು. ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟುಹೋಗುವವು"** (2 ಪೇತ್ರ 3:10). ಆದರೆ

ಮುತ್ತುಗಳು

ಆತನನ್ನು ರಕ್ಷಕನನ್ನಾಗಿ ಅಂಗೀಕರಿಸಿದವರೆಲ್ಲರೂ ಇದಕ್ಕೆ ಮೊದಲೇ ಪರಲೋಕಕ್ಕೆ ಸುರಕ್ಷಿತವಾಗಿ ಎತ್ತಲ್ಪಡುವರು. ಅಬ್ರಹಾಮನಂತಹ ನಂಬಿಕೆಯ ಜನರು **"ಭೂಮಿಯ ಮೇಲೆ ಪರದೇಶದವರೂ ಪ್ರವಾಸಿಗಳೂ ಆಗಿದ್ದೇವೆಂದು ಒಪ್ಪಿಕೊಂಡರು... ಆದರೆ ಅವರು ಪರಲೋಕವೆಂಬ ಉತ್ತಮ ದೇಶವನ್ನು ಹಾರೈಸುವವರು... ದೇವರು ಅವರಿಗೋಸ್ಕರ ಪಟ್ಟಣವನ್ನು ಸಿದ್ಧಮಾಡಿದ್ದಾನೆ"** (ಇಬ್ರಿಯ 11:13–16).

ನಾವು ಕೂಡಾ ಈ ಪಟ್ಟಣದಲ್ಲಿ ವಾಸಿಸಲು ಬಾಧ್ಯರಾಗಬಹುದು. ಏಕೆಂದರೆ ಕ್ರಿಸ್ತನು **"ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವುದಕ್ಕೆ ಶಕ್ತನಾಗಿದ್ದಾನೆ"** (ಇಬ್ರಿಯ 7:25). ■

## ಕಂಪ್ಯೂಟರ್